

ಬಳಗವನ್ನೆಲ್ಲಾ ಸಾಕ್ಷಿ ಪುರಾವೆಗಳನ್ನು ಸೃಷ್ಟಿಸಿ ನಂಬಿಸುವ ಹೊತ್ತಿಗೆ ಇತ್ತ ಪಕ್ಕದ ಮನೆ ಲಿಂಟಲಿನವರೆಗೂ ಎದ್ದು ನಿಂತಿತ್ತು. ಮೊದಲೇ ಊಹಿಸಿದಂತೆ ವಾಯವ್ಯ ಮೂಲೆಯಲ್ಲಿ ಒಂದು ಅಡಿ ಬಿಟ್ಟು ಕಟ್ಟಿದ್ದ ಕೋಣೆ ಟಾಯ್ಲೆಟ್ಟೇ ಆಗಿತ್ತು. ಗೋವಿಂದರಾಯನಿಗೆ ಅದು ದೇವಮೂಲೆಯಾಗಿದ್ದರೆ ಪಕ್ಕದವನಿಗೆ ಅದು ವಾಯುಮೂಲೆಯಾಗಿತ್ತು. ಏನೂ ಮಾಡುವಂತಿಲ್ಲ, ಅನಿವಾರ್ಯ. ಆದರೆ ಟಾಯ್ಲೆಟ್ಟಿನ ವೆಂಟಿಲೇಟರನ್ನು ಈತನ ದೇವರಮನೆಯ ದಿಕ್ಕಿಗೇ ಇಟ್ಟಿರುವುದು ಗೋವಿಂದರಾಯನಿಗೆ ಒಮ್ಮತವಿರಲಿಲ್ಲ. ಮತ್ತೆ ಕ್ಯಾತೆ ತೆಗೆದ. ‘ನಿಮ್ಮ ಮನೆ ಸಂಡಾಸಿನಲ್ಲಿ ಕುಂತು ಬಿಟ್ಟ ಹೂಸನ್ನು ನಮ್ಮನೆ ದೇವರು ಕುಡೀಬೇಕಾ?’ ಎಂದು ರೇಗಾಡಿದ. ತನ್ನ ಸೈಟಿಗೇ ತಾಗಿ ದೇವರ ಮನೆಯ ಗೋಡೆ ಕಟ್ಟಿದ್ದು ಗೋವಿಂದರಾಯನ ಮೊದಲ ತಪ್ಪು ಎಂದು ಪಕ್ಕದವ ವಾದ ಮಾಡಿದನಾದರೂ ಕೊನೆಗೆ ವಿಧಿಯಿಲ್ಲದೇ ವೆಂಟಿಲೇಟರನ್ನು ಬದಲಿಸಿ ಬೇರೆ ದಿಕ್ಕಿಗೆ ಹಾಕಿಕೊಂಡ.

ಪಕ್ಕದಮನೆಯ ಮಾಲೀಕ ಸೈಟಿನ ಹತ್ತಿರ ಕಾಣುವುದೇ ಅಪರೂಪವಾಗಿತ್ತು. ಎರಡು